ಅಗಸ್ಟ್ 21, 2008

**ಉಳಿತಾಯ ಬಾಂಡುಗಳಿಗೆ ಸಹಭದ್ರತೆ ಸೌಲಭ್ಯದ ವಿಸ್ತರಣೆ**

ಅನುಸೂಚಿತ ಬ್ಯಾಂಕುಗಳ ಪರವಾಗಿ ಈಗ, ಉಳಿತಾಯ ಬಾಂಡುಗಳನ್ನು ಒತ್ತೆಯಿಡಬಹುದು ಅಥವಾ ಅಡವು ಇಡಬಹುದು ಅಥವಾ ಆಧಾರವಾಗಿ ಇಡಬಹುದು. ಈ ಸೌಲಭ್ಯ ಬಾಂಡು ಧಾರಕರು ಸಾಲ ಪಡೆಯುವಾಗ ಮಾತ್ರ ದೊರಕುತ್ತದೆ, ಆದರೆ ಮೂರನೆಯ ಕಕ್ಷಿಗಾರರು ಪಡೆಯುವ ಸಾಲಕ್ಕಾಗಿ ದೊರಕುವುದಿಲ್ಲ. ಸರ್ಕಾರದ ಭದ್ರತಾ–ಪತ್ರ ಕಾಯಿದೆ, 2006ರ ಪ್ರಕರಣ 28 ಮತ್ತು ಸರ್ಕಾರದ ಭದ್ರತಾ–ಪತ್ರ ನಿಯಂತ್ರಣಗಳ 21 ಮತ್ತು 22 ರ ನಿಬಂಧನೆಗಳ ಅನ್ವಯ ಅನುಸೂಚಿತ ಬ್ಯಾಂಕುಗಳಿಂದ ಸಾಲ ಪಡೆಯಲು ಸಹ ಭದ್ರತೆಯಾಗಿ, 7%ರ ಉಳಿತಾಯ ಬಾಂಡುಗಳು,2002, 6.5%ಉಳಿತಾಯ ಬಾಂಡುಗಳು,2003(ತೆರಿಗೆ ರಹಿತ)ಮತ್ತು 8% ಉಳಿತಾಯ (ತೆರಿಗೆ ಅನ್ವಯಿಸುವ) ಬಾಂಡುಗಳು,2003ರ ಯೋಜನೆಗಳಿಗೆ ಸಂಬಂಧಪಟ್ಟ ಅಧಿಸೂಚನೆಗಳನ್ನು ಭಾರತ ಸರ್ಕಾರವು ಈಗ ತಿದ್ದುಪಡಿ ಮಾಡಿದೆ.

ಈ ಬಾಂಡುಗಳಿಗೆ ಸಂಬಂಧಪಟ್ಟ ಇತರ ಎಲ್ಲಾ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಯಾಗಿರುವುದಿಲ್ಲ.

**ಜಿ. ರಘುರಾಜ್**
ಉಪ ಮಹಾ ವ್ಯವಸ್ಥಾಪಕರು

**ಪತ್ರಿಕಾ ಪ್ರಕಟಣೆ: 2008–2009/226**